**S.C. No.** 241/2023 **ಪಿ.ಡಬ್ಲ್ಯೂ-1**

**ಸಾಕ್ಷಿಯನ್ನು ದಿನಾಂಕ 22.1.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ಶ್ರೀಮತಿ ಜೆ.ಎಂ ವಕೀಲರಿಂದಃ**

ನಾನು ಕೆ.ಎಸ್.ಆರ್.ಟಿ.ಸಿ ಯಲ್ಲಿ ನಿರ್ವಾಹಕ ಹುದ್ದೆಯಿಂದ ನಿವೃತ್ತಿ ಹೊಂದಿದ್ದೇನೆ. ನನಗೆ ಗಂಡು ಮಕ್ಕಳಿಲ್ಲ ಎಂದರೆ ನಿಜ. ಒಟ್ಟು 3 ಜನ ಹೆಣ್ಣು ಮಕ್ಕಳು ಎಂದರೆ ನಿಜ. ಮೂರು ಜನ ಹೆಣ್ಣು ಮಕ್ಕಳನ್ನು ಬೇಕಾದ್ದೆಲ್ಲ ಕೊಡಿಸಿ ಚನ್ನಾಗಿ ಬೆಳೆಸಿದ್ದೇನೆ ಎಂದರೆ ನಿಜ. ನಾವು ಸಮಾಜದಲ್ಲಿ ಸ್ಥಿತಿವಂತರು ಎಂದರೆ ನಿಜ. ಆ ಕಾರಣಕ್ಕೆ ನನ್ನ ಮಗಳು ಸ್ಥಿತಿವಂತಳಾಗಿ ಬೆಳೆದಿದ್ದಾಳೆ ಎಂದರೆ ನಿಜ. ನನ್ನ ಮೊದಲ ಮಗಳು ಜ್ಯೋತಿ ಇವರು ಬಿ.ಇ. ಪದವಿ ಓದಿರುತ್ತಾರೆ. 2 ನೇ ಮಗಳು ಹೇಮಲತಾ ಇವರು ಬಿ.ಬಿ.ಎ ಪದವಿ ಓದಿರುತ್ತಾರೆ. 3 ನೇ ಮಗಳು ಪಲ್ಲವಿ ಇವರು 10 ನೇ ತರಗತಿ ಓದಿರುತ್ತಾರೆ. ಅವಳು ಮುಂದೆ ಓದಲು ಇಷ್ಟವಿಲ್ಲದ್ದರಿಂದ ಟೈಲರಿಂಗ್ ಕಲಿಯಲು ಇಷ್ಟಪಟ್ಟಿದ್ದರಿಂದ ಅವಳು ಮುಂದೆ ಓದಿರಲಿಲ್ಲ. ಪಲ್ಲವಿ ಸ್ನೇಹಿತರ ಜೊತೆ ಅಲ್ಲಲ್ಲಿ ಸುತ್ತುತ್ತಿದ್ದರಿಂದ ಓದಲು ಇಷ್ಟವಿರಲಿಲ್ಲ ಎಂದರೆ ಸರಿಯಲ್ಲ. ಅವಳಿಗೆ 10 ನೇ ತರಗತಿ ಮುಗಿದಾಗ ಅವಳಿಗೆ 16 ವರ್ಷವಾಗಿತ್ತು. ಪಲ್ಲವಿ ಸ್ನೇಹಿತರ ಜೊತೆ ಸುತ್ತಾಡುತ್ತಾಳೆ ಮತ್ತು ಪ್ರೀತಿ ಪ್ರೇಮ ಎಂದು ಮರ್ಯಾದೆ ತೆಗೆಯುತ್ತಿದ್ದಳು ಎಂದು ಅವಳನ್ನು ಮುಂದೆ ಓದಿಸಲಿಲ್ಲ ಎಂದರೆ ಸರಿಯಲ್ಲ. ಪಲ್ಲವಿಗೆ ಮದುವೆಯಾದಾಗ ಅವಳಿಗೆ 18 ವರ್ಷವಾಗಿತ್ತು. ಅವಳು ಮುಂದೆ ಓದಲಿಲ್ಲವಾದ್ದರಿಂದ ಬೇಗನೇ ಅವಳ ಮದುವೆ ಮಾಡಿದೆವು. ಮದುವೆ ಕಾಲಕ್ಕೆ ಆರೋಪಿಗೆ 22-23 ವರ್ಷವಾಗಿರಬಹುದು. ಮದುವೆ ಕಾಲಕ್ಕೆ ಆರೋಪಿಗೆ 29 ವರ್ಷ ವಯಸ್ಸಾಗಿತ್ತು

ಎಂದರೆ ನೆನಪಿಲ್ಲ. ಆರೋಪಿತನ ತಾಯಿ ಸಹ ಆ ಕಾಲಕ್ಕೆ ನನ್ನ ಮಗನಿಗೆ ಯಾರು ಹೆಣ್ಣು ನೀಡುತ್ತಿಲ್ಲ, ನಿಮ್ಮ ಮಗಳನ್ನು ಕೊಡಿ ಎಂದು ಒತ್ತಾಯ ಮಾಡಿದ್ದರಿಂದಲೂ ಸಹ ಮದುವೆ ಮಾಡಿದೆವು. ಆ ಕಾಲಕ್ಕೆ ಆರೋಪಿತನ ತಾಯಿ ಮೈಸೂರಿನಲ್ಲಿ ವಾಸವಿದ್ದರು. ಆರೋಪಿತನಿಗೆ ಒಳ್ಳೆಯ ಗುಣ ಮತ್ತು ಒಳ್ಳೆಯ ಸಂಬಂಧ ಇದೆ ಎಂದು ನಾವು ಮದುವೆ ಮಾಡಲು ಒಪ್ಪಿದೆವು ಎಂದರೆ ನಿಜ. ಆರೋಪಿಯ ತಾಯಿ ನಮಗೆ ಹತ್ತಿರದ ಸಂಬಂಧಿಯಲ್ಲ ಎಂದರೆ ಸರಿಯಲ್ಲ. ಆರೋಪಿಯ ತಾಯಿಗೆ ನಾವು 2 ನೇ ಮಗಳ ಮದುವೆ ಮಾಡದೇ 3 ನೇ ಮಗಳ ಮದುವೆ ಮಾಡುತ್ತಿದ್ದ ವಿಷಯ ಗೊತ್ತಿತ್ತಾ ಎಂದರೆ ಗೊತ್ತಿತ್ತು. ನಾವು ಮದುವೆ ಬ್ರೋಕರಿಗೆ ಗಂಡು ನೋಡಲು ತಿಳಿಸಿರಲಿಲ್ಲ. ಮದುವೆ ಕಾಲಕ್ಕೆ ಆರೋಪಿ ಕೊರಿಯರ್ ಬಾಯ್ ಕೆಲಸ ಮಾಡುತ್ತಿದ್ದ ಎಂದರೆ ನಿಜ. ಆ ಕಾಲಕ್ಕೆ ಆರೋಪಿ ತನಗೆ 10–12 ಸಾವಿರ ಸಂಬಳ ಬರುತ್ತದೆ ಎಂದು ಹೇಳಿದ್ದ. ಆ ಕಾಲಕ್ಕೆ ನಾನು ಆ ಬಗ್ಗೆ ವಿಚಾರಣೆ ಮಾಡಿರಲಿಲ್ಲ. ಆರೋಪಿ ಚನ್ನಾಗಿ ನೋಡಿಕೊಳ್ಳುತ್ತಾನೆ ಎಂದು ಮದುವೆ ಮಾಡಿದ್ದೆವು. ಒಳ್ಳೆಯ ನಡತೆ ಎಂಬ ಕಾರಣಕ್ಕೆ ಕೊರಿಯರ್ ಬಾಯ್ ಆದರೂ ಪರವಾಗಿಲ್ಲ, ಅಂತಸ್ತು ಇಲ್ಲದಿದ್ದರೂ ಪರವಾಗಿಲ್ಲ ಎಂದು ಒಪ್ಪಿ ಮದುವೆ ಮಾಡಿದೆವು ಎಂದರೆ ನಿಜ. ನನ್ನ ಮೊದಲ ಅಳಿಯ ಮದುವೆ ಕಾಲಕ್ಕೆ ಎರಡು ಮೆಡಿಕಲ್ ಸ್ಟೋರ್ ಹೊಂದಿದ್ದ ಎಂದರೆ ಸರಿಯಲ್ಲ, ಆಗ ಆತ ಮೆಡಿಕಲ್ ರೆಪ್ರಸೆಂಟೆಟಿವ್ ಆಗಿದ್ದ. ಆ ಕಾಲಕ್ಕೆ ನನ್ನ ಮೊದಲ ಅಳಿಯ ತುಂಬಾ ಸ್ಥಿತಿವಂತನಾಗಿದ್ದ ಎಂದರೆ ಸರಿಯಲ್ಲ. ಮದುವೆ ಕಾಲಕ್ಕೆ ಆರೋಪಿಯು ನಜರಬಾದಿನ ಪಾರ್ಕ ಎದುರುಗಡೆಯ ಮನೆಯಲ್ಲಿದ್ದ. ಆ ಮನೆಯ ಪೂರ್ಣ ವಿಳಾಸ ನೆನಪಿಲ್ಲ. ನಂತರ ಆರೋಪಿಯು ವರುಣ ಗ್ರಾಮದ ಬಾಡಿಗೆ ಮನೆಯಲ್ಲಿ ವಾಸವಿದ್ದ. ವರುಣ ಗ್ರಾಮಕ್ಕೆ ಬರುವ ಮೊದಲು ಆರೋಪಿ ಭುಗತಹಳ್ಳಿ ಮತ್ತು ಮಹದೇವಪುರದಲ್ಲಿ ವಾಸವಿದ್ದ. ನಜರಬಾದಿನಲ್ಲಿ 2 ವರ್ಷ, ಭುಗತಹಳ್ಳಿಯಲ್ಲಿ 1 ವರ್ಷ ವಾಸವಿದ್ದ. ಭುಗತಹಳ್ಳಿಯ ಮನೆ ವಿಳಾಸ ನೆನಪಿಲ್ಲ. ಆ ಕಾಲಕ್ಕೆ ನಾನು ಒಂದು ಬಾರಿ ಮಾತ್ರ

ಅವರ ಮನೆಗೆ ಹೋಗಿದ್ದೆ. ಸಾಕ್ಷಿ ಪುನಃ ಹೇಳುತ್ತಾರೆ ಆರೋಪಿ ನಜರಬಾದಿನಿಂದ ಮಹದೇವಪುರಕ್ಕೆ ಹೋಗಿ ನಂತರ ಭುಗತಹಳ್ಳಿಗೆ ಬಂದಿದ್ದ. ಮಹದೇವಪುರದಲ್ಲಿ ಎಷ್ಟು ವಾಸವಿದ್ದ ಎಂದು ಗೊತ್ತಿಲ್ಲ. ಆ ಕಾಲಕ್ಕೆ ನಾನು ಆರೋಪಿ ಮನೆಗೆ ಹೋಗಿರುವುದಿಲ್ಲ. ಮದುವೆಯಾದ 2 ವರ್ಷಕ್ಕೆ ನನ್ನ ಮಗಳು ಗರ್ಭಿಣಿಯಾದಳು. ವರುಣ ಗ್ರಾಮದಲ್ಲಿದ್ದಾಗ ನನ್ನ ಮಗಳು ಗರ್ಭಿಣಿಯಾಗಿದ್ದಳು. ಆ ಕಾಲಕ್ಕೆ ನಮ್ಮ ಮನೆಯಿಂದ 2 ನೇ ಬೀದಿಯಲ್ಲಿ ಆರೋಪಿ ಮನೆ ಇತ್ತು. ಆ ಕಾಲಕ್ಕೆ ನಮ್ಮ ಸಂಬಂಧಿಕರ ಮನೆಯಲ್ಲಿ ಅವರು ಬಾಡಿಗೆಗೆ ಇದ್ದರು, ಆದರೆ ಮನೆ ಮಾಲೀಕರ ಹೆಸರು ಗೊತ್ತಿಲ್ಲ. ಅಂದಾಜು 4 ಸಾವಿರ ಬಾಡಿಗೆ ನೀಡುತ್ತಿದ್ದರು. ವರುಣ ಗ್ರಾಮದ ಮನೆಯಲ್ಲಿ ಮೂರು ವರ್ಷ ವಾಸವಿದ್ದರು. ಆ ಕಾಲಕ್ಕೆ ನನ್ನ ಹೆಂಡತಿ ಅವರ ಮನೆಗೆ ಹೋಗುತ್ತಿದ್ದರು ಮತ್ತು ನನ್ನ ಮಗಳ ಸಹ ನಮ್ಮ ಮನೆಗೆ ಬರುತ್ತಿದ್ದರು. ಬಾಡಿಗೆ ವಿಷಯಕ್ಕೆ ಗಲಾಟೆ ಮಾಡಿಕೊಂಡು ಆರೋಪಿ ಪದೇ ಪದೇ ಮನೆ ಬದಲಾಯಿಸುತ್ತಿದ್ದ. ಆ ಬಗ್ಗೆ ಮನೆ ಮಾಲೀಕರು ನಮಗೆ ಹೇಳುತ್ತಿದ್ದರು, ಆದರೆ ಆ ಬಗ್ಗೆ ಪೋಲಿಸರಿಗೆ ದೂರು ನೀಡಿಲ್ಲ. ನನ್ನ ಮಗಳು ಮನೆಯಲ್ಲಿರದೇ ಮೊದಲನೇ ಅಳಿಯನ ಜೊತೆ ಸುತ್ತಾಡುತ್ತಿದ್ದರಿಂದ ಆರೋಪಿ ವಿಳಾಸ ಗೊತ್ತಾಗಬಾರದೆಂದು ಪದೇ ಪದೇ ಮನೆ ಬದಲಾಯಿಸುತ್ತಿದ್ದ ಎಂದರೆ ಸರಿಯಲ್ಲ. ಆರೋಪಿ ಬಡವನಾಗಿದ್ದರಿಂದ ನಾವು ಹೇಳಿದಂತೆ ಕೇಳುತ್ತಾನೆ ಎಂದು ನನ್ನ ಮಗಳನ್ನು ಕೊಟ್ಟು ಮದುವೆ ಮಾಡಿದೆವು ಎಂದರೆ ನಿಜ. ವರುಣ ಗ್ರಾಮದ ಮನೆಯಲ್ಲಿದ್ದಾಗ ನನ್ನ ಮಗಳು ಗರ್ಭಿಣಿಯಾದಾಗ ಸೀಮಂತ ಕಾರ್ಯಕ್ರಮ ಮಾಡಿರುವುದಿಲ್ಲ. ಆ ಕಾಲಕ್ಕೆ ಆರೋಪಿ ಬಳಿ ಹಣವಿಲ್ಲವಾದ್ದರಿಂದ ನಾವು ಸರಳವಾಗಿ ಕಾರ್ಯಕ್ರಮ ಮಾಡಿ ಮಗಳನ್ನು ನಮ್ಮ ಮನೆಗೆ ಕರೆದುಕೊಂಡು ಬಂದೆವು. ಆ ಕಾಲಕ್ಕೆ ನಮ್ಮ ಹಣ ಖರ್ಚು ಮಾಡಿ ಸೀಮಂತ ಮಾಡಲು ತೊಂದರೆ ಇರಲಿಲ್ಲ, ಆದರೆ ನಾವು ಸರಳವಾಗಿ ಕಾರ್ಯಕ್ರಮ ಮಾಡಿದೆವು. ಮದುವೆಗೆ ಮುಂಚಿನಿಂದಲೂ ನನ್ನ ಮಗಳು

ಟೈಲರಿಂಗ್ ಕೆಲಸಕ್ಕೆ ಹೋಗುತ್ತಿದ್ದಳು. ಅವಳು 5 ವರ್ಷದವರೆಗೆ ಅಗ್ರಹಾರದಲ್ಲಿ ಟೈಲರಿಂಗ್ ಕಲಿಯಲು ಹೋಗುತ್ತಿದ್ದಳು. ಆಗ ಬಿಡುವಿದ್ದಾಗ ನಾನೇ ಬಿಟ್ಟು ಬರುತ್ತಿದ್ದೆ, ಕರೆದುಕೊಂಡು ಬರುತ್ತಿದ್ದೆ. ಉಳಿದ ಸಮಯದಲ್ಲಿ ಬಸ್‌ನಲ್ಲಿ ಬರುತ್ತಿದ್ದಳು. ಆದರೆ ಎಷ್ಟು ಬಾರಿ ನಾನು ಕರೆದುಕೊಂಡು ಹೋಗಿರುತ್ತೇನೆ ಎಂದು ನೆನಪಿಲ್ಲ. ಲೇಡಿ ಟೈಲರ್ ಬಳಿ ನನ್ನ ಮಗಳು ಕಲಿಯಲು ಹೋಗುತ್ತಿದ್ದಳು, ಅವರ ಹೆಸರು ನೆನಪಿಲ್ಲ. ಅವರ ಮನೆ 101 ಗಣಪತಿ ದೇವಸ್ಥಾನದ ಬಳಿ ಇದೆ.

ಈಗ ನಾನು ನೋಡುತ್ತಿರುವ ದಾಖಲೆ ದಿನಾಂಕ 18.1.2023 ರಂದು ಆರೋಪಿ, ಆತನ ಹೆಂಡತಿ ಹಾಗೂ ಮಗನ ನಡುವೆ ಮಾಡಿಕೊಂಡಿದ್ದ ವಿಭಾಗಪತ್ರದ ಪ್ರತಿ ಎಂದರೆ ನಿಜ. ಸದರಿ ದಾಖಲೆಯನ್ನು ಆರೋಪಣ ಪತ್ರದ ಜೊತೆ ಸಲ್ಲಿದ್ದರಿಂದ ಅದನ್ನು ನಿಪಿ1 ಎಂದು ಗುರುತಿಸಿದೆ. ನಿಪಿ1 ದಾಖಲೆಯಲ್ಲಿ ಬರೆದಿರುವ ವಿಷಯ ಸರಿಯಿದೆ ಎಂದರೆ ನಿಜ. ಸಾಕ್ಷಿ ಸ್ವತಃ ಹೇಳುತ್ತಾರೆ ಆರೋಪಿ ಮಾಡಿದ್ದ 10 ಲಕ್ಷ ರೂ.ಗಳ ಸಾಲವನ್ನು ನಾನು ತೀರಿಸಿದ್ದರಿಂದ ಆ ಮನೆ ನನ್ನ ಮಗಳು ಹಾಗೂ ಮೊಮ್ಮಗನಿಗೆ ಸೇರಬೇಕೆಂದು ಅದನ್ನು ಮಾಡಿಸಿದ್ದೆವು. ದಿನಾಂಕ 24.1.2023 ರಂದು ನಾನೇ 8 ಲಕ್ಷ ರೂ. ಬ್ಯಾಂಕ್ ಸಾಲವನ್ನು ನನ್ನ ಮೊದಲ ಅಳಿಯ ಮರು ಪಾವತಿ ಮಾಡಿದ್ದರು ಎಂದರೆ ನನ್ನ ಮೊದಲ ಅಳಿಯ, ಮೊದಲ ಮಗಳು ಹಾಗೂ ನಾನು ಸೇರಿ ಪಾವತಿ ಮಾಡಿರುತ್ತೇವೆ. ಈಗ ನನಗೆ ತೋರಿಸುತ್ತಿರುವ ದಾಖಲೆ ಆ ಕುರಿತಾದ ಆಧಾರ ಖುಲಾಸೆ ಪತ್ರದ ಪ್ರತಿ ಎಂದರೆ ನಿಜ. ಸದರಿ ದಾಖಲೆಯನ್ನು ಆರೋಪಣ ಪತ್ರದ ಜೊತೆ ಸಲ್ಲಿದ್ದರಿಂದ ಅದನ್ನು ನಿಪಿ2 ಎಂದು ಗುರುತಿಸಿದೆ. ಈಗ ನಾನು ನೋಡುತ್ತಿರುವ ಇನ್ನೊಂದು ದಾಖಲೆ ನನ್ನ ಮಗಳ ಪಲ್ಲವಿಗೆ ಸೇರಿದ ಬ್ಯಾಂಕ್ ಖಾತೆಯ ಪ್ರತಿ ಎಂದರೆ ನಿಜ. ಸದರಿ ದಾಖಲೆಯನ್ನು ಆರೋಪಣ ಪತ್ರದ ಜೊತೆ ಸಲ್ಲಿದ್ದರಿಂದ ಅದನ್ನು ನಿಪಿ3 ಎಂದು ಗುರುತಿಸಿದೆ.

ಕೆ.ಎಸ್.ಆರ್.ಟಿ.ಸಿ ಬಡಾವಣೆಯ ಮನೆಯನ್ನು ನನ್ನ ಮಗಳಿಗೋಸ್ಕರ ನನ್ನ ಹೆಂಡತಿಯ ತಮ್ಮ ಮಾಡಿಕೊಟ್ಟಿದ್ದರು. ನನ್ನ ಮಗಳು ಸಾಯುವ ಒಂದರಿಂದ ಒಂದುವರೆ ತಿಂಗಳ ಮೊದಲು ಆ ಮನೆ ಮಾಡಿಕೊಟ್ಟಿದ್ದರು. ಆರೋಪಿ ಇಸ್ಪೀಟ್ ಆಡುತ್ತಿದ್ದರಿಂದ, ಆನ್‌ಲೈನ್ ಗೇಮ್ ಆಡುತ್ತಿದ್ದರಿದ ಮತ್ತು ಖಾಸಗಿಯಾಗಿ ಸಾಲ ಮಾಡಿದ್ದರಿಂದ ಆ ವಿಚಾರಕ್ಕೆ ನನ್ನ ಮಗಳ ಜೊತೆ ಜಗಳವಾಗುತ್ತಿತ್ತು. ಆ ರೀತಿ ಜಗಳವಾದ ಬಗ್ಗೆ ದೂರಿನಲ್ಲಿ ಹೇಳಿಲ್ಲ. ಆ ರೀತಿ ಜಗಳವಾದಾಗ ಪೋಲಿಸರಿಗೆ ದೂರು ನೀಡಿಲ್ಲ. ನನ್ನ ಮಗಳು ಸಾಯುವ ಮೊದಲು ಯಾವತ್ತೂ ದೂರು ನೀಡಿಲ್ಲ. ನನ್ನ ಮಗಳು ಟ್ರೈನಿಂಗ್ ಸಲುವಾಗಿ ಹೋಗುತ್ತಿದ್ದಳು ಹಾಗೂ ಮನೆಯಲ್ಲಿ ಹೊಲಿಗೆ ಕೆಲಸ ಮಾಡುತ್ತಿದ್ದಳು. ಹೊಲಿಗೆ ಕೆಲಸದಿಂದ ಎಷ್ಟು ಆದಾಯ ಬರುತ್ತಿತ್ತು ಎಂದು ಗೊತ್ತಿಲ್ಲ. ಆರೋಪಿ ಮದುವೆಗೂ ಮೊದಲು ವರುಣ ಗ್ರಾಮದಲ್ಲಿ ಸೈಟ್ ಖರೀದಿಸಿದ್ದರು. ಮದುವೆ ಕಾಲಕ್ಕೆ ಆ ಸೈಟ್ ಬಗ್ಗೆ ಗೊತ್ತಿತ್ತಾ ಎಂದರೆ ನಾನೇ ವ್ಯಾಪಾರ ಮಾಡಿಸಿ ಅದನ್ನು ಕೊಡಿಸಿದ್ದೆ, ಆರೋಪಿ ಹಣ ನೀಡಿದ್ದ. ಆರೋಪಿಯು ಚಿಕ್ಕವನಿದ್ದಾಗಿಂದಲೂ ಪರಿಚಯವಿದ್ದನು. ಚಿಕ್ಕವನಿದ್ದಾಗ ಆರೋಪಿ ಬೆಂಗಳೂರಿನಲ್ಲಿ ವಾಸವಿದ್ದ. 2020 ರಲ್ಲಿ ಮನೆ ಕಟ್ಟುವ ಸಲುವಾಗಿ ಆರೋಪಿ ಸಾಲ ಮಾಡಿದ್ದ. ಮನೆ ತಾರಸಿವರೆಗೆ ಕಟ್ಟಿದ ಬಳಿಕ ಕೆಲಸ ಮುಂದುವರೆಸಲು ಹಣವಿಲ್ಲದ್ದರಿಂದ ಮತ್ತು ಸಾಲ ಮಾಡಿದ್ದರಿಂದ ಆರೋಪಿ ಮನೆ ಬಿಟ್ಟು ಹೋಗಿದ್ದ. ಮನೆ ಕಟ್ಟಲು ಪ್ರಾರಂಭ ಮಾಡಿದಾಗಲೇ ಆರೋಪಿ ತಾಯಿ ಮರಣ ಹೊಂದಿದ್ದರು. ಆ ಕಾಲಕ್ಕೆ ಆರೋಪಿಗೂ ನನ್ನ ದೊಡ್ಡ ಅಳಿಯನಿಗೂ ಯಾವುದೇ ಜಗಳವಾಗಿಲ್ಲ. ದೊಡ್ಡ ಅಳಿಯನಿಗೆ ಸಿದ್ದಾರ್ಥ ಲೇಔಟಿನಲ್ಲಿ ಮನೆ ಇತ್ತು. ನನ್ನ ದೊಡ್ಡ ಅಳಿಯ ಪಲ್ಲವಿಯನ್ನು ಸಿದ್ದಾರ್ಥ ಲೇಔಟಿನಲ್ಲಿ ಮನೆಗೆ ಕರೆದುಕೊಂಡು ಹೋಗಿ ಇಬ್ಬರೂ ಒಟ್ಟಿಗೆ ಇದುದ್ದರಿಂದಲೇ ಗಲಾಟೆಯಾಯಿತು ಎಂದರೆ ಸರಿಯಲ್ಲ. ಅವರಿಬ್ಬರೂ ಒಟ್ಟಿಗೆ ಇದುದ್ದನ್ನು ನೋಡಿ ಆರೋಪಿ ಗಲಾಟೆ ಮಾಡಿದ ಎಂದರೆ ಸರಿಯಲ್ಲ. ಆ ವಿಷಯ ಮನೆಯವರಿಗೆಲ್ಲ

ಗೊತ್ತಿತ್ತು ಎಂದರೆ ಸರಿಯಲ್ಲ. ಆ ಕಾಲಕ್ಕೆ ನೀನು ಹೊರಗಡೆ ವಿಷಯ ಹೇಳಿದರೆ ವರದಕ್ಷಿಣೆ ಕೇಸು ಹಾಕಿ ಜೈಲಿಗೆ ಹಾಕಿಸುವುದಾಗಿ ಹೇಳಿದ್ದರಿಂದ ಆರೋಪಿ ಮನೆ ಬಿಟ್ಟು ಹೋಗಿದ್ದ ಎಂದರೆ ಸರಿಯಲ್ಲ. ಆರೋಪಿ ಮನೆ ಬಿಟ್ಟು ಹೋದಾಗ ನಾವು ಕಾಣೆಯಾದ ಬಗ್ಗೆ ದೂರು ನೀಡಿರುವುದಿಲ್ಲ. 3 ವರ್ಷ ಆರೋಪಿ ಕಾಣೆಯಾಗಿದ್ದ. ಆಗ ನಾವು ಆರೋಪಿಯನ್ನು ಹುಡುಕಲು ಪ್ರಯತ್ನ ಮಾಡಿರುವುದಿಲ್ಲ. ಅವನು ಇದ್ದು ಪ್ರಯೋಜನವಿಲ್ಲವೆಂಬ ಕಾರಣಕ್ಕೆ ಹೋದರೆ ಹೋಗಲೆಂದು ಮನೆಯನ್ನು ಪೂರ್ಣಗೊಳಿಸಿದೆವು. ಆರೋಪಿಯೇ ಸೈಟ್ ಖರೀದಿಸಿ ಮನೆ ಕಟ್ಟಲು ಪ್ರಾರಂಭಿಸಿದ ಎಂದರೆ ನಿಜ. ಆರೋಪಿಯು ತನ್ನ ಆದಾಯಕ್ಕೆ ತಕ್ಕಂತೆ ಮನೆ ಕಟ್ಟಿಸುತ್ತಿದ್ದ ಎಂದರೆ ಸರಿಯಲ್ಲ. ನನ್ನ ಮಗಳಿಗೆ ಲಕ್ಷುರಿ ಜೀವನ ಬೇಕಿತ್ತು ಎಂದರೆ ಸರಿಯಲ್ಲ. ಗೃಹಪ್ರವೇಶದ ಕಾಲಕ್ಕೆ ಆರೋಪಿಯನ್ನು ಕರೆಸಲು ಪ್ರಯತ್ನ ಮಾಡಿದಿರಾ ಎಂದರೆ ನನ್ನ ಮಗಳೇ ಬೇಡವೆಂದು ಹೇಳಿದಳು. 2 ನೇ ಮಗಳ ಮದುವೆ ಕಾಲಕ್ಕೂ ಸಹ ಆರೋಪಿ ಎಲ್ಲಿದ್ದಾನೆ ಎಂದು ಗೊತ್ತಿಲ್ಲದ್ದರಿಂದ ಕರೆಸಿರಲಿಲ್ಲ. ಆರೋಪಿ ಮೈಸೂರಿನಲ್ಲಿದ್ದ ಬಗ್ಗೆ ಗೊತ್ತಿದ್ದರೂ ಸಹ ಆರೋಪಿ ಬಡವನೆಂಬ ಕಾರಣಕ್ಕೆ ಆತನನ್ನು ಕರೆದಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಮಗಳಿಗೆ ಗಂಡನ ಜೊತೆ ಬಾಳ್ವೆ ಮಾಡಲು ಇಷ್ಟವಿಲ್ಲದ್ದರಿಂದ ಮತ್ತು ದೊಡ್ಡ ಅಳಿಯನ ಜೊತೆ ಸಂಬಂಧ ಇದ್ದರಿಂದ ಅರೋಪಿಯನ್ನು ಕರೆಸುವುದು ಬೇಡವೆಂದು ಹೇಳಿದ್ದಳು ಎಂದರೆ ಸರಿಯಲ್ಲ.

ಪ್ರವೀಣ್ ಆರಾಧ್ಯ ಎಂಬುವವರು ನಮ್ಮ ಸಂಬಂಧಿ ಇದ್ದಾರೆ. ಅವರ ತಂದೆ ಹೆಸರು ಗೊತ್ತಿಲ್ಲ. ಅವರಿಗೆ ನನ್ನ ಮಗಳು ಪಲ್ಲವಿ ಜೊತೆ ಸ್ನೇಹವಿರಲಿಲ್ಲ. ಆ ಪ್ರವೀಣ್ ಆರಾಧ್ಯ ಇವರೊಂದಿಗೆ ನನ್ನ ಮಗಳ ಬ್ಯಾಂಕ್ ಖಾತೆಯಲ್ಲಿ ಹಲವಾರು ವ್ಯವಹಾರಗಳು ನಡೆದಿವೆ ಎಂದರೆ ಗೊತ್ತಿಲ್ಲ. ಪ್ರವೀಣ್ ಆರಾಧ್ಯ ಇವರು ನನ್ನ ದೊಡ್ಡ ಅಳಿಯನ ಸ್ನೇಹಿತ ಇದ್ದಾನೋ ಇಲ್ಲವೋ ಗೊತ್ತಿಲ್ಲ. ಆ ಪ್ರವೀಣ್ ಆರಾಧ್ಯ ನನ್ನ ಮಗಳ ಖಾತೆಗೆ

ಹಲವಾರು ಬಾರಿ ಹಣ ಕಳುಹಿಸಿದ್ದಾನೆ ಎಂದರೆ ಸರಿಯಲ್ಲ. ನನ್ನ ಎಲ್ಲ ಬ್ಯಾಂಕ್ ವ್ಯವಹಾರವನ್ನು ನಾನೇ ನೋಡಿಕೊಳ್ಳುತ್ತೇನೆ. ನನಗೆ ಬ್ಯಾಂಕ್ ವ್ಯವಹಾರದ ಬಗ್ಗೆ ಅಷ್ಟೊಂದು ಗೊತ್ತಿಲ್ಲವಾದ್ದರಿಂದ ನನ್ನ ಮಗಳ ಬ್ಯಾಂಕ್ ಸಾಲ ತೀರಿಸಲು ನಾನು ಹೋಗಿರುವುದಿಲ್ಲ. ದಿನಾಂಕ 18.5.2022 ರಂದು ನನ್ನ ಮಗಳ ಖಾತೆಗೆ 8,04,000/- ಆರ್.ಟಿ.ಜಿ.ಎಸ್ ಮೂಲಕ ಬಂದಿದೆ ಎಂದರೆ ನಿಜ. ಆರೋಪಿಯ ಖಾತೆಗೆ ಆ ಹಣವನ್ನು ಹಾಕಿ ಬ್ಯಾಂಕ್ ಸಾಲ ತೀರಿಸಲು ತೊಂದರೆ ಇತ್ತಾ ಎಂದರೆ ಇತ್ತು. ಆ ಹಣವನ್ನು ನನ್ನ ದೊಡ್ಡ ಅಳಿಯ ಪಾವತಿಸಿರುತ್ತಾನೆ ಎಂದರೆ ಸರಿಯಲ್ಲ. ಅದನ್ನು ನಮ್ಮ ಚಿನ್ನ ಮಾರಾಟ ಮಾಡಿ ನಮಗೆ ಪಾವತಿ ಮಾಡಿದ್ದಾನೆ. ನಾನು ಪಿ.ಯು.ಸಿ ವರೆಗೆ ಓದಿರುತ್ತೇನೆ. ನಮ್ಮ ಮನೆಯ ಹಣಕಾಸಿನ ವ್ಯವಹಾರವನ್ನು ನಾನೇ ನೋಡಿಕೊಳ್ಳುತ್ತೇನೆ ಎಂದರೆ ನಿಜ. ಖಾಸಗಿ ಬ್ಯಾಂಕಿಗೆ ಓಡಾಡಲು ನನಗೆ ಗೊತ್ತಿಲ್ಲವಾದ್ದರಿಂದ ಆ ಸಾಲ ತೀರಿಸಲು ನನ್ನ ದೊಡ್ಡ ಅಳಿಯನಿಗೆ ಹೇಳಿದ್ದೆ. ನನ್ನ ಮಗಳ ಜೊತೆ ದೊಡ್ಡ ಅಳಿಯನಿಗೆ ಸಂಬಂಧ ಚನ್ನಾಗಿದ್ದರಿಂದ ಅವನೇ ಹಣ ನೀಡಿ ಸಾಲ ತೀರಿಸಿರುತ್ತಾನೆ ಮತ್ತು ಆರೋಪಿಗೆ ಹೆದರಿಸಿ ಮನೆಯನ್ನು ನನ್ನ ಮಗಳ ಹೆಸರಿಗೆ ಬರೆಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

ಬೆಳಿಗ್ಗೆ 8-8.30 ಕ್ಕೆ ನನ್ನ 2 ನೇ ಮಗಳು ಹೇಳಿದ್ದರಿಂದ ಪಲ್ಲವಿ ಮರಣ ಹೊಂದಿರುವ ಬಗ್ಗೆ ಗೊತ್ತಾಯಿತು. ಆರೋಪಿ ನನ್ನ ಮಗಳಿಗೆ ಹೊಡೆಯುವುದು ಬಡಿಯುವುದು ಮಾಡಿದಾಗ ಗಾಯವಾಗಿರುವುದನ್ನು ನೋಡಿಲ್ಲ. ಆರೋಪಿ ನನ್ನ ಮಗಳ ನಡತೆ ಸರಿಯಿಲ್ಲವೆಂದು ಹೇಳಿ ಟಿ.ವಿ ಮತ್ತು ಇತರೆ ವಸ್ತುಗಳನ್ನು ಹೊಡೆದು ಹಾಕಿದಾಗ ದೂರು ನೀಡಲು ತೊಂದರೆ ಇರಲಿಲ್ಲ. ನನ್ನ ಮಗಳು ಸಾಯುವ 15 ದಿನಗಳ ಮೊದಲು ಯಾವುದೇ ಗಲಾಟೆಯಾಗಿಲ್ಲ ಎಂದರೆ ಸರಿಯಲ್ಲ. ನನ್ನ ಮಗಳು ಮರಣ ಹೊಂದಿದ ದಿನ ಬೆಳಿಗ್ಗೆ 8.15 ಗಂಟೆಗೆ ನಾನು ಅವರ ಮನೆ ಬಳಿ ಹೋಗಿದ್ದೆ.

ಆ ಕಾಲಕ್ಕೆ ನಾನು, ನನ್ನ ಹೆಂಡತಿ, ಮಾವ, ಬಾಮೈದ ಅಲ್ಲಿಗೆ ಹೋದೆವು. ಆ ಕಾಲಕ್ಕೆ ನನ್ನ ದೊಡ್ಡ ಅಳಿಯನೇ ಅಲ್ಲಿಗೆ ಕರೆದುಕೊಂಡು ಹೋದರು. ಆ ಕಾಲಕ್ಕೆ ಮೊದಲಿಗೆ ನನ್ನ ಹೆಂಡತಿ ಮನೆ ಒಳಗೆ ಹೋಗಿದ್ದಳು. ಆ ಕಾಲಕ್ಕೆ ನಾವು 5-6 ಜನ ಅಲ್ಲಿಗೆ ಹೋಗಿದ್ದೆವು. ನಾವು ಹೋದ ಬಳಿಕ ಮನೆ ಮಾಲೀಕರು ಸಹ ಅಲ್ಲಿಗೆ ಬಂದರು. ಆ ದಿನ ಪೋಲಿಸರು ಎಂಓ 1 ರಿಂದ 5 ನ್ನು ತೆಗೆದುಕೊಂಡು ಏನು ಮಾಡಿದರು ಎಂದರೆ ಸುತ್ತಿಕೊಂಡು ತೆಗೆದುಕೊಂಡು ಹೋದರು. ಅವುಗಳನ್ನು ಪೋಸ್ಟಮಾರ್ಟಂ ಮಾಡಲು ತೆಗೆದುಕೊಂಡು ಹೋದರು. ನಿಪಿ3 ಪೋಟೋದಲ್ಲಿ ನಾನು ಕಾಣುತ್ತಿಲ್ಲ ಎಂದರೆ ನಿಜ. ಆ ದಿನ ನಾನು ಮನೆಗೆ ಹೋಗಿಲ್ಲವಾದ್ದರಿಂದ ಪೋಟೋದಲ್ಲಿ ಇಲ್ಲ ಎಂದರೆ ಸರಿಯಲ್ಲ. ಆಗ ಪೋಲಿಸರು ಏನು ಮಾಡಿದರು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ದೂರನ್ನು ಪೊಲೀಸ್ ಠಾಣೆಯಲ್ಲಿ ನನ್ನ ತಂಗಿಯ ಮಗನ ಮೂಲಕ ಬರೆಸಿರುತ್ತೇನೆ. ಆದರೆ ದೂರಿನಲ್ಲಿ ಗೆಳೆಯ ಇದ್ದ ಬಗ್ಗೆ ನಮೂದಿಲ್ಲ. ದೂರನ್ನು ನಾನು ಹೇಳಿದಂತೆ ಅವರು ಬರೆದಿರುತ್ತಾರೆ. ನನ್ನ ಮಗಳ ಕುತ್ತಿಗೆಯಲ್ಲಿ ಗಾಯಗಳು ಇದುದ್ದರಿಂದ ಕುತ್ತಿಗೆ ಹಿಸುಕಿ ಸಾಯಿಸಿದ್ದಾನೆ ಎಂದು ದೂರಿನಲ್ಲಿ ಬರೆಸಿರುತ್ತೇನೆ. ಆಸ್ಪತ್ರೆ ಬಳಿ ನನ್ನ ಹೇಳಿಕೆ ಪಡೆದಿಲ್ಲ. ದೂರಿನಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನನ್ನ ಮಗಳ ಕೊಲೆಗೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಿಪಿ1 ದಾಖಲೆ ಮಾಡಿದ ಬಳಿಕ ಆರೋಪಿಯು ಶಿವಣ್ಣನ ಮಗ ಸೇತುರಾಮ್ ಎಂಬುವವರ ಮನೆಯಲ್ಲಿ ಬಾಡಿಗೆಗೆ ಇದ್ದ ಎಂದರೆ ಸರಿಯಲ್ಲ. ನಿಪಿ1 ರ ಪ್ರಕಾರ ಆರೋಪಿಯು ಪ್ರತ್ಯೇಕವಾಗಿ ಜೀವನ ಮಾಡುತ್ತಿದ್ದ ಎಂದರೆ ಸರಿಯಲ್ಲ. ಮಹಜರ್ ಕಾಲಕ್ಕೆ ಯಾರು ಯಾರು ಸಹಿ ಮಾಡಿದ್ದಾರೆ ಎಂದು ಗೊತ್ತಿಲ್ಲ. ಪೋಲಿಸರು ಆ ಸ್ಥಳದಿಂದ ಏನನ್ನು ತೆಗೆದುಕೊಂಡು ಹೋದರು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನನ್ನ ಮೊದಲ ಅಳಿಯನೇ ನನ್ನ ಮಗಳ ಸಾವಿಗೆ ಕಾರಣ ಎಂದರೆ ಸರಿಯಲ್ಲ. ನನ್ನ ಮೊದಲ ಮಗಳ ಬಾಳು ಹಾಳಾಗುತ್ತದೆ ಎಂದು

ಆರೋಪಿಯ ವಿರುದ್ಧ ಸುಳ್ಳು ದೂರು ನೀಡಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಮೊದಲ ಅಳಿಯ ಮತ್ತು ನನ್ನ ಮಗಳ ಅನೈತಿಕ ಸಂಬಂಧವೇ ಅವಳ ಸಾವಿಗೆ ಕಾರಣ ಎಂದರೆ ಸರಿಯಲ್ಲ. ಆರೋಪಿಗೂ ನನ್ನ ಮಗಳ ಸಾವಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ.,

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮೈಸೂರು